# ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು ನಗರ

## ಸಿ.ಸಿ.ನಂ. 11340/2019

| | |
|---|---|
| ಸಾಕ್ಷಿದಾರರ ಹೆಸರು : | ಡಾ. ನಿಧಿ |
| ಗಂಡನ ಹೆಸರು : | ಸೂರಜ್ ಕುಂಬ್ಳೆ |
| ವಯಸ್ಸು : | 36 ವರ್ಷ |
| ಉದ್ಯೋಗ : | ವೈದ್ಯರು |
| ವಾಸ : | ಜಯನಗರ 4ಟಿ ಬ್ಲಾಕ್, ಬೆಂಗಳೂರು. |

**ದಿನಾಂಕ 26/03/2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಹಿರಿಯ ಸ.ಸ.ಅ ರವರಿಂದಃ**

1. ನಾನು 2012 ರಿಂದ 2023 ರವರೆಗೆ ನಾನು ಸಾಯಿರಾಮ ಆಸ್ಪತ್ರೆಯಲ್ಲಿ ವೈದ್ಯಳಾಗಿ ಕೆಲಸ ಮಾಡಿರುತ್ತೇನೆ.

2. ದಿನಾಂಕ 25/01/2019 ರಂದು ಅಶೀಷ್ ಎಂಬ ಗಾಯಾಳು ನಮ್ಮ ಆಸ್ಪತ್ರೆಗೆ ಬೆಳಿಗ್ಗೆ ಬಂದಿದ್ದರು. ಪರಿಚಿತರಿಂದ ಹಲ್ಲೆಗೊಳದಾಗ ಹಿನ್ನೆಲೆಯಲ್ಲಿ ಚಿಕಿತ್ಸೆಗೆ ಬಂದಿದ್ದರು. ನಾನು ಅವರನ್ನು ಪರಿಶೀಲಿಸಿದಾಗ ಅವರ ಬಲಗಣ್ಣಿನ ಸುತ್ತ ಊತ ಆಗಿದ್ದು, ಕೆಂಪಾಗಿದ್ದು. ತಲೆಯ ಹಿಂಭಾಗದಲ್ಲಿ ಸಹ ಊತ ಗಾಯವಾಗಿತ್ತು. ಎರಡು ತುಟಿಗಳ ಮೇಲೆ ಕೊಯ್ದಂತಹ ಹಾಗೂ ಹರಿದಂತಹ ಗಾಯ ಕಂಡು ಬಂದಿರುತ್ತದೆ. ಸದರಿ ಗಾಯಗಳು ಸಾಧಾರಣ ಸ್ವರೂಪದ ಗಾಯಗಳಾಗಿವೆ ಎಂದು ಅಭಿಪ್ರಾಯ ಪಟ್ಟು ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣ ಪತ್ರದ ಮೇಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದಾರೆ. **ಆದ್ದರಿಂದ ಗಾಯದ ಪ್ರಮಾಣ ಪತ್ರವನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.**

**ಪಾಟೀ ಸವಾಲುಃ 4ನೇ ಆರೋಪಿ ಪರ ವಕೀಲರಿಂದಃ**

3. ದಿನಾಂಕ 25/01/2019 ರಂದು ನನ್ನ ಕೆಲಸದ ಅವಧಿ ಬೆಳಿಗ್ಗೆ 09.00 ರಿಂದ ಮದ್ಯಾಹ್ನ 03.00 ಗಂಟೆಯವರೆಗೆ ಇತ್ತು. ನಿಪಿ-1 ರಲ್ಲಿ ಎಮ್.ಎಲ್.ಸಿ ನಂಬರ್ ಮತ್ತು ದಿನಾಂಕ ನಮೂದಿಸಿಲ್ಲ ಎಂದರೆ ಸರಿ. ಗಾಯಳು ಒಬ್ಬನೇ ಬಂದಿದ್ದನೋ ಅಥವಾ ಯಾರ ಜೊತೆಗೆ ಬಂದಿದ್ದನೋ ಎಂದು ನನಗೆ ಈಗ ನೆನಪಿಲ್ಲ. ಒಬ್ಬ ವ್ಯಕ್ತಿ ನೆಲದ ಮೇಲೆ ಬಿದ್ದಾಗ ನಿಪಿ-1 ರಲ್ಲಿ ನಮೂದಿಸಿದಂತಹ ಗಾಯಗಳಾಗುವ ಸಾಧ್ಯತೆ ಇದೆಯೇ ಎಂಬ ಸಲಹೆಗೆ ಸಾಕ್ಷಿಯು ಒಂದೇ ಬಾರಿಗೆ ಎರಡು ಗಾಯಗಳಾಗುವ ಸಾಧ್ಯತೆ ಎನ್ನುವ ಬಗ್ಗೆ ನನಗೆ ಅನುಮಾನ ಇದೆ ಎಂದು ಹೇಳುತ್ತಾರೆ.

4. ಚಾಸಾ-1 ರವರು ನನ್ನ ಆಸ್ಪತ್ರೆಗೆ ಚಿಕಿತ್ಸೆಗೆ ಬಂದಿಲ್ಲ, ಆದ್ದರಿಂದ ಗಾಯಳು ಬಂದ ಸಮಯವನ್ನು ಮತ್ತು ಜೊತೆಯಲ್ಲಿ ಯಾರಿದ್ದರು ಎಂದು ಹಾಗೂ ಎಮ್..ಎಲ್.ಸಿ ನಂಬರ್ ಹಾಗೂ ದಿನಾಂಕವನ್ನು ನಾನು ಬರೆದಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಮಾತು ಕೇಳಿ ಸುಳ್ಳು ಗಾಯದ ಪ್ರಮಾಣ ಪತ್ರ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1, 3 ಮತ್ತು 5 ನೇ ಆರೋಪಿತರ ಪರ ವಕೀಲರಿಂದಃ ವಕೀಲರು ಗೈರು ಹಾಜರು. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.**
**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ. ಕೇ. ಸ. ಇ.

(ರಂಗೇಗೌಡ ಸಿ.)
ಮು.ಮ.ದಂ.ನ್ಯಾ.ಬೆಂ.ನಗರ.